ಮಿನಿ ಕಾಗ್

ಈ ಮಾಪನವನ್ನು ಉಪಯೋಗಿಸಲು ಹಾಗೂ ಅಂಕಗಳನ್ನು ನಮೂದಿಸುವ ಬಗ್ಗೆ ಸೂಚನೆಗಳು

ಗುರುತಿನ ಸಂಖ್ಯೆ: _____ ದಿನಾಂಕ: _____

ಹಂತ ೧: ಮೂರು ಪದಗಳನ್ನು ಪುನರುಚ್ಚರಿಸಿ:
ವ್ಯಕ್ತಿಯನ್ನು ನೇರವಾಗಿ ನೋಡಿ ಹೀಗೆ ಹೇಳಿರಿ, "ದಯವಿಟ್ಟು ನನ್ನ ಮಾತನ್ನು ಎಚ್ಚರಿಕೆಯಿಂದ ಆಲಿಸಿ. ನಾನು ಮೊದಲು ಮೂರು ಪದಗಳನ್ನು ಹೇಳುತ್ತೇನೆ ನೀವು ಕೂಡಲೇ ಅವನ್ನು ಪುನರುಚ್ಚರಿಸಿ ಹಾಗೂ ನೆನಪಿಟ್ಟುಕೊಳ್ಳಲು ಪ್ರಯತ್ನಿಸಿ. ಆ ಮೂರು ಪದಗಳು [ಕೆಳಗಿನ ಆವೃತ್ತಿಗಳಿಂದ ಪದಗಳ ಪಟ್ಟಿಯನ್ನು ಆರಿಸಿ]. ದಯವಿಟ್ಟು ಅವುಗಳನ್ನು ನನಗೆ ಹೇಳಿ. " ಮೂರು ಪ್ರಯತ್ನಗಳ ನಂತರ ವ್ಯಕ್ತಿಯು ಪದಗಳನ್ನು ಪುನರಾವರ್ತಿಸಲು ಸಾಧ್ಯವಾಗದಿದ್ದರೆ, ಹಂತ 2 (ಗಡಿಯಾರ ಬಿಡಿಸುವುದು) ಕ್ಕೆ ಮುಂದುವರಿಯಿರಿ.
ಒಂದು ಅಥವಾ ಹೆಚ್ಚಿನ ವೈದ್ಯಕೀಯ ಅಧ್ಯಯನಗಳಲ್ಲಿ ಈ ಕೆಳಗಿನ ಮತ್ತು ಇತರ ಪದಗಳ ಪಟ್ಟಿಗಳನ್ನು ಬಳಸಲಾಗಿದೆ .1-3 ಪುನರಾವರ್ತಿತ ಬಳಕೆಗಾಗಿ, ಪರ್ಯಾಯ ಪದಗಳ ಪಟ್ಟಿಯನ್ನು ಬಳಸಲು ಶಿಫಾರಸು ಮಾಡಲಾಗಿದೆ.

ಆವೃತ್ತಿ 1	**ಆವೃತ್ತಿ 2**	**ಆವೃತ್ತಿ 3**	**ಆವೃತ್ತಿ 4**	**ಆವೃತ್ತಿ 5**	**ಆವೃತ್ತಿ 6**
ಬಾಳೆಹಣ್ಣು	ಮುಖಂಡ	ಗ್ರಾಮ	ನದಿ	ನಾಯಕ	ಮಗಳು
ಸೂರ್ಯೋದಯ	ಮಾಸ	ಅಡಿಗೆಮನೆ	ರಾಷ್ಟ್ರ	ಉದ್ಯಾನ	ಸ್ವರ್ಗ
ಕುರ್ಚಿ	ಮೇಜು	ಮಗು	ಬೆರಳು	ಚಿತ್ರ	ಪರ್ವತ

ಹಂತ 2: ಗಡಿಯಾರದ ರೇಖಾಚಿತ್ರ:
ಹೇಳಿ: "ಈಗ ನೀವು ನನಗೆ ಗಡಿಯಾರದ ರೇಖಾಚಿತ್ರವನ್ನು ಬಿಡಿಸಬೇಕೆಂದು ನಾನು ಬಯಸುತ್ತೇನೆ. ಮೊದಲು, ನೀವು ಗಡಿಯಾರದಲ್ಲಿ ಎಲ್ಲಾ ಸಂಖ್ಯೆಗಳನ್ನು ಬರೆಯಿರಿ" ಅದು ಪೂರ್ಣಗೊಂಡಾಗ, ಹೇಳಿ: "ಈಗ, ಗಡಿಯಾರದ ಮುಳ್ಳುಗಳು 11ಗಂಟೆ 10 ನಿಮಿಷ ತೋರಿಸುವಂತೆ ಬಿಡಿಸಿರಿ.
ಈ ವ್ಯಾಯಾಮಕ್ಕಾಗಿ ಪೂರ್ವ ಮುದ್ರಿತ ವೃತ್ತವನ್ನು ಬಳಸಿ (ಮುಂದಿನ ಪುಟವನ್ನು ನೋಡಿ). ಇದು ಜ್ಞಾಪಕಶಕ್ತಿ ಪರೀಕ್ಷೆಯಲ್ಲದ ಕಾರಣ ಸೂಚನೆಗಳನ್ನು ಪುನರಾವರ್ತಿಸಿ. ಮೂರು ನಿಮಿಷಗಳಲ್ಲಿ ಗಡಿಯಾರದ ರೇಖಾಚಿತ್ರ ಪೂರ್ಣಗೊಳ್ಳದಿದ್ದರೆ ಹಂತ 3 ಕ್ಕೆ ಮುಂದುವರಿಯಿರಿ.

ಹಂತ 3: ಮೂರು ಪದಗಳ ಮರು ನೆನಪು:
ಹಂತ 1 ರಲ್ಲಿ ನೀವು ಹೇಳಿದ ಮೂರು ಪದಗಳನ್ನು ನೆನಪಿಸಿಕೊಳ್ಳುವಂತೆ ವ್ಯಕ್ತಿಯನ್ನು ಕೇಳಿ. ಹೇಳಿ: "ನಾನು ನಿಮಗೆ ಹೇಳಿದ ಮೂರು ಪದಗಳು ಯಾವುವು
ನೆನಪಿದೆಯೇ? " ಪದ ಪಟ್ಟಿ ಆವೃತ್ತಿ ಸಂಖ್ಯೆ ಮತ್ತು ವ್ಯಕ್ತಿಯ ಉತ್ತರಗಳನ್ನು ಕೆಳಗೆ ನಮೂದಿಸಿರಿ.

ಪದ ಪಟ್ಟಿ ಆವೃತ್ತಿ: _____ ವ್ಯಕ್ತಿಯ ಉತ್ತರಗಳು: _____ _____ _____

ಪದಗಳ ಪುನರುಚ್ಚರಿಸಿ --------- (0-3 ಅಂಕಗಳು)	ಯಾವುದೂ ಸುಳಿವು ಇಲ್ಲದೆ ಸ್ವಯಂಪ್ರೇರಿತವಾಗಿ ನೆನಪಿಸಿಕೊಂಡರೆ ಪ್ರತಿ ಪದಕ್ಕೂ 1 ಅಂಕ.
ಗಡಿಯಾರದ ರೇಖಾಚಿತ್ರ ---------- (0 ಅಥವಾ 2 ಅಂಕ)	ಸಾಮಾನ್ಯ ಗಡಿಯಾರ = 2 ಅಂಕಗಳು. ಸಾಮಾನ್ಯ ಗಡಿಯಾರದ ಎಲ್ಲಾ ಸಂಖ್ಯೆಗಳನ್ನು ಅನುಕ್ರಮವಾಗಿ ಸರಿಯಾಗಿ ಸ್ಥಾನದಲ್ಲಿ ಇರಿಸಲಾಗಿದೆ (ಉದಾ., 12, 3, 6 ಮತ್ತು 9 ಇವು ಪ್ರಮುಖ ಸ್ಥಾನಗಳು) ಮತ್ತು ಯಾವುದೇ ಸಂಖ್ಯೆ ಪುನರಾವರ್ತನೆಯಾಗದೆ ಅಥವಾ ಕಾಣೆಯಾಗಿರದೆ ಗಡಿಯಾರದ ಮುಳ್ಳುಗಳು 11 ಮತ್ತು 2 ಗೆ (11:10) ತೋರಿಸುತ್ತಿವೆ. ಮುಳ್ಳುಗಳ ಉದ್ದವನ್ನು ಪರಿಗಣಿಸಲಾಗಿಲ್ಲ. ಗಡಿಯಾರವನ್ನು ಬಿಡಿಸಲು ಅಸಮರ್ಥತೆ ಅಥವಾ ನಿರಾಕರಣೆ (ಅಸಹಜ) = 0 ಅಂಕಗಳು.
ಒಟ್ಟು ಅಂಕಗಳು ---------- (0-5 ಅಂಕಗಳು)	ಒಟ್ಟು ಅಂಕಗಳು= ಪದಗಳ ಪುನರುಚ್ಚರಿಸಿ ಅಂಕ+ ಗಡಿಯಾರ ರೇಖಾಚಿತ್ರ ಅಂಕ ಮಿನಿ-ಕಾಗ್ ನಲ್ಲಿ <3 ಅಂಕಗಳನ್ನು ಮರೆವಿನ ಕಾಯಿಲೆಯ ಸ್ಕ್ರೀನಿಂಗ್ ಪರೀಕ್ಷೆಗಾಗಿ ಮೌಲ್ಯೀಕರಿಸಲಾಗಿದೆ, ಆದರೆ ಪ್ರಾಯೋಗಿಕವಾಗಿ ಅರ್ಥಪೂರ್ಣವಾದ ಅರಿವಿನ ದೌರ್ಬಲ್ಯ ಹೊಂದಿರುವ ಅನೇಕ ವ್ಯಕ್ತಿಗಳು ಹೆಚ್ಚಿನ ಅಂಕಗಳನ್ನು ಪಡೆಯುತ್ತಾರೆ. ಪರೀಕ್ಷೆಯಲ್ಲಿ ಹೆಚ್ಚಿನ ನಿಖರತೆ ಬಯಸಿದಾಗ, <4 ಅಂಕಗಳನ್ನು ಶಿಫಾರಸು ಮಾಡಲಾಗುತ್ತದೆ ಇದು ಅರಿವಿನ ಸ್ಥಿತಿಯ ಹೆಚ್ಚಿನ ಮೌಲ್ಯಮಾಪನದ ಅಗತ್ಯವನ್ನು ಸೂಚಿಸುತ್ತದೆ.

Mini-Cog © S. Borson. All rights reserved. Reprinted with permission of the author solely for clinical and educational purposes.
May not be modified or used for commercial, marketing, or research purposes without permission of the author (soob@uw.edu).
v. 01.19.16

ಗಡಿಯಾರದ ರೇಖಾಚಿತ್ರ

ಗುರುತಿನ ಸಂಖ್ಯೆ: _____ ದಿನಾಂಕ: _____



References

1. Borson S, Scanlan JM, Chen PJ et al. The Mini-Cog as a screen for dementia: Validation in a population based sample. J Am Geriatr Soc 2003;51:1451–1454.
2. Borson S, Scanlan JM, Watanabe J et al. Improving identification of cognitive impairment in primary care. Int J Geriatr Psychiatry 2006;21: 349–355.
3. Lessig M, Scanlan J et al. Time that tells: Critical clock-drawing errors for dementia screening. Int Psychogeriatr. 2008 June; 20(3): 459–470.
4. Tsoi K, Chan J et al. Cognitive tests to detect dementia: A systematic review and meta-analysis. JAMA Intern Med. 2015; E1-E9.
5. McCarten J, Anderson P et al. Screening for cognitive impairment in an elderly veteran population: Acceptability and results using different versions of the Mini-Cog. J Am Geriatr Soc 2011; 59: 309-213.
6. McCarten J, Anderson P et al. Finding dementia in primary care: The results of a clinical demonstration project. J Am Geriatr Soc 2012; 60: 210-217.
7. Scanlan J & Borson S. The Mini-Cog: Receiver operating characteristics with the expert and naive raters. Int J Geriatr Psychiatry 2001; 16: 216-222.

Mini-Cog © S. Borson. All rights reserved. Reprinted with permission of the author solely for clinical and educational purposes. May not be modified or used for commercial, marketing, or research purposes without permission of the author (soob@uw.edu).
v. 01.19.16